# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 758 |
| ಸದಸ್ಯರ ಹೆಸರು | : | ಡಾ. ಎಂ.ಜಿ. ಮುಳೆ (ವಿಧಾನಸಭಾ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 10-03-2026 |
| ಉತ್ತರಿಸುವ ಸಚಿವರು | : | ಪೌರಾಡಳಿತ ಮತ್ತು ಹಜ್ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ನಗರದ ಸದ್ಯದ ಜನಸಂಖ್ಯೆಗೆ ಪ್ರತಿ ದಿನ ಅಗತ್ಯವಿರುವ 42.36 MLD ನೀರಿನಲ್ಲಿ ಎಷ್ಟು ಪ್ರಮಾಣ ಪೂರೈಕೆಯಾಗುತ್ತಿದೆ; ನಗರದ 24x7 ನೀರು ಪೂರೈಕೆ ಯೋಜನೆ ಕಳೆದ 11 ವರ್ಷಗಳಿಂದ ವಿಳಂಬವಾಗಲು ಮತ್ತು ಪೈಪ್ ಲೈನ್ ಸೋರಿಕೆಗೆ ಕಾರಣರಾದ ಅಧಿಕಾರಿಗಳ ಮೇಲೆ ಕೈಗೊಂಡ ಕ್ರಮವೇನು; | ಬೀದರ್ ನಗರಕ್ಕೆ ಪ್ರಸ್ತುತ ಜನಸಂಖ್ಯೆಗೆ ಪ್ರತಿ ದಿನ 38 MLD ನೀರು ಪೂರೈಕೆ ಆಗುತ್ತಿದೆ.<br><br>ಬೀದರ್ ನಗರಕ್ಕೆ 24x7 ಕುಡಿಯುವ ನೀರು ಸರಬರಾಜು ಕಾಮಗಾರಿಯನ್ನು ದಿನಾಂಕ 30/01/2015 ರಲ್ಲಿ ಪ್ರಾರಂಭಿಸಿ, ರೂ.32.60 ಕೋಟಿ ವೆಚ್ಚದಲ್ಲಿ ದಿನಾಂಕ 31/08/2018 ರಲ್ಲಿ ಪೂರ್ಣಗೊಳಿಸಲಾಗಿದೆ. ಆದ ಕಾರಣ ಯೋಜನೆಯ ಅನುಷ್ಠಾನ 11 ವರ್ಷ ವಿಳಂಬವಾಗಿರುವುದಿಲ್ಲ.<br><br>ಬೀದರ್ ನಗರದಲ್ಲಿ ರಸ್ತೆ, ಚರಂಡಿ ಹಾಗೂ ಇತರೆ ಕಾಮಗಾರಿಗಳ ಸಮಯದಲ್ಲಿ 24x7 ಪೈಪ್ ಲೈನ್‌ಗಳಿಗೆ ಹಾನಿಯಾಗಿದ್ದು, ಸದರಿ ಪೈಪ್ ಲೈನ್‌ಗಳ ದುರಸ್ತಿಯನ್ನು ಸಂಬಂಧಪಟ್ಟ ಗುತ್ತಿಗೆದಾರರಿಂದ ಮಾಡಿಕೊಳ್ಳಲಾಗುತ್ತಿದೆ. |
| ಆ) | ನಾರಾಯಣಪುರ ಜಲಾಶಯದಿಂದ ಬೀದರ್ ಜಿಲ್ಲೆಗೆ ನೀರು ತರುವ ರೂ.1600 ಕೋಟಿ ಮೊತ್ತದ ಬೃಹತ್ ಯೋಜನೆ ಮತ್ತು 'ಅಮೃತ್ 2.0' (AMRUT 2.0) ಅಡಿಯಲ್ಲಿ ನಗರದ ನೀರು ಸರಬರಾಜು ವ್ಯವಸ್ಥೆ ಸುಧಾರಿಸಲು ಮಂಜೂರಾದ ಅನುದಾನದ ಪ್ರಸಕ್ತ ಸ್ಥಿತಿಗತಿ ಏನು? | ನಾರಾಯಣಪುರ ಜಲಾಶಯದಿಂದ ಬೀದರ್ ಜಿಲ್ಲೆಗೆ ನೀರು ತರುವ ರೂ. 1600 ಕೋಟಿ ಮೊತ್ತದ ಯೋಜನೆಯಿಂದ ಬೀದರ್ ನಗರಕ್ಕೆ ನೀರು ಸರಬರಾಜು ಕಾಮಗಾರಿ ಇರುವುದಿಲ್ಲ.<br><br>ಅಮೃತ್-2.0 ಯೋಜನೆಯಡಿ ರಾಜ್ಯಕ್ಕೆ ಹಂಚಿಕೆಯಾದ ಅನುದಾನದ ಉಳಿತಾಯ ಮೊತ್ತದಲ್ಲಿ ಬೀದರ್ ನಗರದ ನೀರು ಸರಬರಾಜು ವ್ಯವಸ್ಥೆಯನ್ನು ಸುಧಾರಿಸಲು ರೂ.30.00 ಕೋಟಿಗಳ ಅನುದಾನವನ್ನು ಹಂಚಿಕೆ ಮಾಡಲಾಗಿರುತ್ತದೆ. ಸದರಿ ಅನುದಾನದಡಿ ಬೀದರ್ ನಗರದ ವ್ಯಾಪ್ತಿಯಲ್ಲಿ ಹೊಸದಾಗಿ ಅಭಿವೃದ್ಧಿ ಹೊಂದಿದ ಪ್ರದೇಶಗಳಿಗೆ ನೀರು ಸರಬರಾಜು ವ್ಯವಸ್ಥೆಯನ್ನು ಒದಗಿಸುವ ಕಾಮಗಾರಿಗೆ ಅಂದಾಜು ಪಟ್ಟಿ ತಯಾರಿಸುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. |

ಸಂಖ್ಯೆ: ನಅಇ 61 ಸಿಎಸ್‌ಎಸ್ 2026

(ರಹೀಂ ಖಾನ್)
ಪೌರಾಡಳಿತ ಮತ್ತು ಹಜ್ ಸಚಿವರು